# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :1207 |
| ಉತ್ತರಿಸಬೇಕಾದ ದಿನಾಂಕ | :15.12.2023 |
| ಸದಸ್ಯರ ಹೆಸರು | :ಡಾ: ಚಂದ್ರಶೇಖರ್ ಬಿ ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕ್ರಮವೇನು : | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡಾಪಟುಗಳಿಗೆ ತರಬೇತಿ ನೀಡುವ ನಿಟ್ಟಿನಲ್ಲಿ ಬೀದರ್ ಜಿಲ್ಲೆಯ ನೆಹರೂ ಕ್ರೀಡಾಂಗಣದಲ್ಲಿ ಕ್ರೀಡಾ ವಸತಿ ನಿಲಯವನ್ನು ಸ್ಥಾಪಿಸಲಾಗಿದೆ.<br><br>ಸದರಿ ಕ್ರೀಡಾ ವಸತಿ ನಿಲಯದಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಒಟ್ಟು 49 ಕ್ರೀಡಾಪಟುಗಳು ಪ್ರವೇಶ ಪಡೆದಿರುತ್ತಾರೆ.<br><br>ಕ್ರೀಡಾ ವಸತಿ ಶಾಲೆ/ನಿಲಯಕ್ಕೆ ಪ್ರವೇಶ ಪಡೆದ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನ ಭತ್ಯೆ ಕ್ರೀಡಾ ಸಮವಸ್ತ್ರ, ಉಚಿತ ವೈದ್ಯಕೀಯ ಸೌಲಭ್ಯ, ಮನೆಪಾಠ, ನಿತ್ಯ ಬಳಕೆಯ ಅಗತ್ಯ ಸಾಮಗ್ರಿಗಳು ಇತ್ಯಾದಿ ಸೌಲಭ್ಯಗಳನ್ನು ಇಲಾಖೆಯ ವತಿಯಿಂದ ಒದಗಿಸಲಾಗುತ್ತಿದೆ. |
| ಆ) | ಬೀದರ್ ಜಿಲ್ಲೆಯಿಂದ ಇಲ್ಲಿಯವರೆಗೆ ಎಷ್ಟು ಕ್ರೀಡಾಪಟುಗಳು ವಿವಿಧ ಕ್ರೀಡೆಗಳಿಗೆ ಆಯ್ಕೆಯಾಗಿದ್ದಾರೆ; (ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ, ಮೂರು ವರ್ಷಗಳಲ್ಲಿ ಈ ಕೆಳಕಂಡ ಅಥ್ಲೆಟಿಕ್ಸ್ ಕ್ರೀಡಾಪಟುಗಳು ರಾಜ್ಯ/ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ:- |

| ಕ್ರ. ಸ | ವರ್ಷ | ಕ್ರೀಡಾಪಟುವಿನ ಹೆಸರು/ಕ್ರೀಡೆ | ಪಂದ್ಯಾವಳಿಯ ಹೆಸರು |
|---|---|---|---|
| 1 | 2021-22 | ವಿವೇಕಾನಂದ (800 ಮೀ)-ತೃತೀಯ ಸ್ಥಾನ | ರಾಷ್ಟ್ರ ಮಟ್ಟದ ಕ್ರೀಡಾ ಪಂದ್ಯಾವಳಿ |

| | | | |
|---|---|---|---|
| 2 | | ಪುಷ್ಪಕ್ ನೆಲ್ವಾಡೆ (ಜಾವೆಲಿನ್)-ಪ್ರಥಮ ಸ್ಥಾನ | |
| 3 | 2022-23 | ಪುಷ್ಪಕ್ ನೆಲ್ವಾಡೆ (ಜಾವೆಲಿನ್)- ಪ್ರಥಮ ಸ್ಥಾನ | ಕರ್ನಾಟಕ ರಾಜ್ಯ ಕಿರಿಯ & ಹಿರಿಯರ ಅಥ್ಲೆಟಿಕ್ಸ್ ಪಂದ್ಯಾವಳಿ |
| 4 | | ಪುಷ್ಪಕ್ ನೆಲ್ವಾಡೆ (ಜಾವೆಲಿನ್)- ನಾಲ್ಕನೇ ಸ್ಥಾನ | 37 ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ |
| 5 | | ಪುಷ್ಪಕ್ ನೆಲ್ವಾಡೆ (ಜಾವೆಲಿನ್)- ಭಾಗವಹಿಸುವಿಕೆ | ರಾಷ್ಟ್ರ ಮಟ್ಟದ ಕ್ರೀಡಾ ಪಂದ್ಯಾವಳಿ |
| 6 | 2023-24 | ಪುಷ್ಪಕ್ ನೆಲ್ವಾಡೆ (ಜಾವೆಲಿನ್)- ಪ್ರಥಮ ಸ್ಥಾನ | ರಾಷ್ಟ್ರೀಯ ಮಟ್ಟದ ಕ್ರೀಡಾ ಪಂದ್ಯಾವಳಿ |

| | | |
|---|---|---|
| ಇ) | ಉನ್ನತ ಮಟ್ಟದಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು? (ಮಾಹಿತಿ ಒದಗಿಸುವುದು) | ಉನ್ನತ ಮಟ್ಟದಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ:-<br>1. **<u>ಕ್ರೀಡಾ ವಸತಿ ನಿಲಯಗಳು</u>:** ರಾಜ್ಯದಾದ್ಯಂತ ಪದವಿ ಹಂತದ ಕ್ರೀಡಾಪಟುಗಳಿಗೆ ಸೇರಿದಂತೆ ವಿವಿಧ ವಯೋಮಾನದ ಕ್ರೀಡಾಪಟುಗಳಿಗೆ ತರಬೇತಿ ನೀಡಲು 34 ಕ್ರೀಡಾ ವಸತಿ ನಿಲಯಗಳನ್ನು ಇಲಾಖೆಯಿಂದ ಸ್ಥಾಪಿಸಿದ್ದು ಪರಿಣಿತರಿಂದ ತರಬೇತಿ ನೀಡಲಾಗುತ್ತಿದೆ.<br>2. **<u>ಖೇಲೋ ಇಂಡಿಯಾ ರಾಜ್ಯ ಮಟ್ಟದ ಉತ್ಕೃಷ್ಟತಾ ಕೇಂದ್ರ :</u>** ಖೇಲೋ ಇಂಡಿಯಾ ಯೋಜನೆಯಡಿ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ, ವಿದ್ಯಾನಗರ, ಬೆಂಗಳೂರು, ಇಲ್ಲಿ ಅಥ್ಲೆಟಿಕ್ಸ್, ಈಜು ಹಾಗೂ ಶೂಟಿಂಗ್ ವಿಭಾಗಗಳಲ್ಲಿ ಖೇಲೋ ಇಂಡಿಯಾ ರಾಜ್ಯ ಮಟ್ಟದ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಸದರಿ ಕೇಂದ್ರದಲ್ಲಿ 50 ಕ್ರೀಡಾಪಟುಗಳು ಪ್ರವೇಶ ಪಡೆದು ನುರಿತ ತರಬೇತುದಾರರಿಂದ ವೈಜ್ಞಾನಿಕ ತರಬೇತಿ ಪಡೆಯುತ್ತಿರುತ್ತಾರೆ.<br>3. **<u>ಅಮೃತ ಕ್ರೀಡಾದತ್ತು ಯೋಜನೆ:</u>** ಭಾರತ |

| | | |
|---|---|---|
| | | ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಘೋಷಿಸಿದ್ದ ಅಮೃತ ಕ್ರೀಡಾ ದತ್ತು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು ಮುಂದಿನ ಪ್ಯಾರೀಸ್ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಪದಕ ವಿಜೇತ ಸಾಮರ್ಥ್ಯವುಳ್ಳ 75 ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಒಲಂಪಿಕ್ಸ್ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಪೋಷಿಸಿ ಸಾಧನೆಗೆ ಅಗತ್ಯವಾದ ಬೆಂಬಲ ವ್ಯವಸ್ಥೆ ನೀಡುವುದು ಈ ಯೋಜನೆಯ ಗುರಿಯಾಗಿದೆ. ಸದರಿ ಯೋಜನೆಯ ಫಲಾನುಭವಿಗಳಿಗೆ ತಲಾ ರೂ.10.00ಲಕ್ಷಗಳ ವಾರ್ಷಿಕ ಗರಿಷ್ಠ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |

**ಕಡತ ಸಂಖ್ಯೆ: ವೈಎಸ್ ಡಿ /226/ಸಿಡಿಎನ್/2023**

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು